ಉದಾತ್ತ ನಿಲವಿನ,
ಉದಾರ ದೃಷ್ಟಿಕೋನದ,
ಸಮಸ್ತ ಸಂಸ್ಕೃತಿ
ಪರಂಪರೆಯ ಸಂರಕ್ಷಕ
ಶಕ್ತಿಗಳು ವಿಶ್ವಕ್ಕೆ
ವಿವೇಕವನ್ನು ಮನಗಾಣಿಸಿ
ಕೊಡುವ ಕಾರ್ಯವನ್ನು
ನಡೆಸಬೇಕಿದೆ

ಮುಕ್ತ
ಸಮಾಜವಾದಿ
ಮಾತುಕತೆ

# ವಿಶ್ವ ಬೌದ್ಧ ಪರಂಪರೆಯ ಸಂರಕ್ಷಣೆ



ಅಫಘಾನಿಸ್ತಾನದಲ್ಲಿ ಬಾಮಿಯಾನ್ ಪ್ರದೇಶದಲ್ಲಿ ಬುದ್ಧ ಪ್ರತಿಮೆಗಳನ್ನು ತಾಲಿಬಾನ್ ಉಗ್ರವಾದಿಗಳು ಸ್ಫೋಟಿಸಿ ಒಂದೂವರೆ ದಶಕವಾಯಿತು. ಇದಕ್ಕಾಗಿ ಆಗ ವಿಶ್ವಾದ್ಯಂತ ಖಂಡನೆ ವ್ಯಕ್ತವಾಗಿತ್ತು. ಅದು ಅಲ್ಲಿಗೇ ನಿಂತಿತೇ? ಇಲ್ಲ. ಅದು ಈಗಲೂ ಮುಂದುವರೆದಿದೆ.

ಈ ಬಗ್ಗೆ ವಿಶ್ವದ ಬೌದ್ಧರು, ಪುರಾತತ್ವಜ್ಞರು, ವಿಶ್ವ ಪರಂಪರೆಯ ಪ್ರತಿಪಾದಕರು, ಬೌದ್ಧ ರಾಷ್ಟ್ರಗಳು ಗಮನ ನೀಡಬೇಕಿದೆ.

ಬೌದ್ಧ ಅವಶೇಷಗಳ ನಾಶಕಾರ್ಯವನ್ನು ತಾಲಿಬಾನ್ ಉಗ್ರವಾದಿಗಳೇ ಮುಂದುವರೆಸಿದ್ದಾರೆಯೆ? ಊಹೂಂ. ಅವರು ತಮ್ಮ ಹೀನ ಕಾರ್ಯವನ್ನು 2001ಕ್ಕೇ ಸ್ಥಗಿತಗೊಳಿಸಿದರು.

ಆದರೆ, ಆಗ ಅವರ ಹೇಯಕೃತ್ಯವನ್ನು ಖಂಡಿಸಿದ ಶಕ್ತಿಗಳೇ, ನಂತರದ ವರ್ಷಗಳಲ್ಲಿ ಬೌದ್ಧ ಅವಶೇಷಗಳ ನಿರ್ನಾಮ ಕಾರ್ಯವನ್ನು ಮುಂದುವರೆಸಿವೆ.

ಯಾರೀ ಶಕ್ತಿಗಳು? ಉತ್ತರ ನೇರ ಹಾಗೂ ಸರಳವಾಗಿವೆ.

2002ರ ನಂತರ ಬಾಮಿಯಾನ್ ಪ್ರದೇಶದಲ್ಲಿ ಈ ಘಾತುಕ ಕೃತ್ಯಗಳನ್ನು ನಡೆಸುತ್ತಿರುವುದು ಅಮೆರಿಕಾ; ಇದಕ್ಕೆ ತಾಂತ್ರಿಕ ನೆರವು ನೀಡುತ್ತಿರುವುದು ಚೀನಾ.

ತಾಲಿಬಾನ್ ಉಗ್ರವಾದಿಗಳ ಹಾಗೆ ಅಮೆರಿಕಾ ಪ್ರತಿಮೆ ಪೂಜೆ ಹತ್ತಿಕ್ಕುವ ತತ್ವವನ್ನೇನೂ ಪ್ರತಿಪಾದಿಸುವುದಿಲ್ಲ; ಇನ್ನು ಚೀನಾ? ಅದು, 'ನನ್ನ ಶ್ರೇಷ್ಠ ರಾಷ್ಟ್ರೀಯ ಪರಂಪರೆಯಲ್ಲಿ ಬೌದ್ಧ ಧರ್ಮದ ಕೊಡುಗೆ ಕೂಡ ಸೇರಿದೆ' ಎಂದು ಬೊಗಳೆ ಹೊಡೆಯುವ ದೇಶ. ಅಲ್ಲದೆ, ತಾತ್ವಿಕವಾಗಿ ತಾವು ಪರಸ್ಪರರಿಗೆ ವಿರೋಧವಾಗಿ ಇರುವ ಘಂಟಾಘೋಷ ಮಾಡುವ ಈ ಎರಡೂ ರಾಷ್ಟ್ರಗಳು, ಈಗ ಬಾಮಿಯಾನ್ ಬೌದ್ಧ ಪರಂಪರೆಯನ್ನು ನೆಲಸಮ ಮಾಡಲು ಮಾತ್ರ ಒಗ್ಗೂಡಿವೆ. ಇದರ ಮರ್ಮವಾದರೂ ಏನು?

ಈ ಪ್ರಶ್ನೆಗೆ ಒಂದೇ ಉತ್ತರ ಇದೆ. ಅದು, ಲಾಭ/ವ್ಯಾಪಾರದ ದುರಾಸೆ. ಬಾಮಿಯಾನ್ ಪ್ರದೇಶದಲ್ಲಿ ಅಪಾರವಾಗಿ ಲಭ್ಯವಿರುವ ತಾಮ್ರದ ಗಣಿಗಾರಿಕೆಯಲ್ಲಿ ಎರಡೂ ರಾಷ್ಟ್ರಗಳು ಆಸಕ್ತಿ ಹೊಂದಿವೆ.

ಅಫಘಾನಿಸ್ತಾನದ ರಾಜಧಾನಿ ಕಾಬೂಲ್‌ಗೆ ದಕ್ಷಿಣಕ್ಕೆ 70 ಕಿ.ಮೀ. ದೂರದಲ್ಲಿರುವ ಮೆಸ್ ಐನಾಕ್ ಭಾಗದಲ್ಲಿ ಚೀನಾದ ಮೆಟಲರ್ಜಿಕಲ್ ಗ್ರೂಪ್ ಕಾರ್ಪೊರೇಷನ್ ಈಗಾಗಲೇ ತಾಮ್ರ ಗಣಿಗಾರಿಕೆಯನ್ನು ನಡೆಸಿದೆ. 2007ರಲ್ಲಿ ಆಗಿರುವ ಒಪ್ಪಂದದ ಪ್ರಕಾರ, ಚೀನಾ ಕಂಪನಿ 30 ಕೋಟಿ ಡಾಲರ್ ರಾಯಲ್ಟಿ ಪಾವತಿಸಿ, ತಾಮ್ರ ಗಣಿಗಾರಿಕೆ ನಡೆಸಲು ಅನುಮತಿ ಪಡೆದುಕೊಂಡಿದೆ. ಈ ಅವಧಿ ಈಗ ಮುಗಿದಿದೆ. ಇಲ್ಲಿ ಮತ್ತು ಅಫಘಾನಿಸ್ತಾನದ ಇತರ ಕಡೆ ಇನ್ನಷ್ಟು ತಾಮ್ರ (ಅಥವಾ ಇತರ ಖನಿಜ) ಗಣಿಗಾರಿಕೆಗೆ ಚೀನಾ ಆಸಕ್ತಿ ತೋರಿದೆ. ಈ ಲಾಭ/ವ್ಯಾಪಾರದಲ್ಲಿ ಅಮೆರಿಕಾ ಕೂಡ ಪರೋಕ್ಷ ಪಾಲುದಾರಿಕೆ ಹೊಂದಿದೆ.

2016ರವರೆಗೆ ದೇಶದ ವಿವಿಧ ಕಡೆ ಗಣಿಗಾರಿಕೆಯ ಸಾಧ್ಯತೆಗಳನ್ನು ಪರಿಶೀಲಿಸಿ, ಕನಿಷ್ಠ ಇನ್ನೂ 30 ಕೋಟಿ ಡಾಲರ್ ಗಳಿಸಬಹುದು ಎಂದು ಅಫಘಾನಿಸ್ತಾನದ ಹಣಕಾಸು ಮಂತ್ರಿ ಒಮರ್ ಝುಖೀಲ್‌ವಾಲ್ 2012ರಷ್ಟು ಹಿಂದೆಯೇ ಪ್ರಕಟಿಸಿದ್ದರು. ಆದರೆ, ಈ ವ್ಯವಹಾರದಲ್ಲಿ 3ಕೋಟಿ ಡಾಲರ್‌ಗಿಂತ ಅಧಿಕ ಕಿಕ್‌ಬ್ಯಾಕ್

ಮೊತ್ತ ವಿವಿಧ ದೇಶಿ ಹಾಗೂ ವಿದೇಶಿ ವ್ಯಕ್ತಿ/ಕಂಪನಿಗಳಿಗೆ ಪಾವತಿಯಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಈ ವ್ಯವಹಾರಕ್ಕೆ ಹಸಿರು ನಿಶಾನೆ ಸಿಕ್ಕಿಲ್ಲ.

ಬಾಮಿಯಾನ್ ಪ್ರದೇಶದಲ್ಲಿನ ಬೌದ್ಧ ಪರಂಪರೆಯ ಅವಶೇಷಗಳನ್ನು ಸಂರಕ್ಷಿಸುವ ದಿಕ್ಕಿನಲ್ಲಿ ಯಾವ ಮೂಲೆಯಲ್ಲೂ ಚಿಂತನೆ, ಕಾಳಜಿ, ಬದ್ಧತೆ ಕಾಣಲಿಲ್ಲ. ಬದಲಾಗಿ, ಇಲ್ಲಿನ ಬೌದ್ಧ ಅವಶೇಷಗಳನ್ನು ಸುರಕ್ಷಿತವಾಗಿ ಬೇರೆ ಕಡೆಗೆ ಸ್ಥಳಾಂತರಿಸುವ ವಿಷಯ ಪ್ರಾಮುಖ್ಯ ಪಡೆಯಿತು.

ಅಮೆರಿಕಾ–ಚೀನಾ (ಅಫಘಾನಿಸ್ತಾನ್ ಕೂಡ) ಈ ವಿಷಯದಲ್ಲಿ ಅಪಾರ ಆಸಕ್ತಿ ವಹಿಸಿದವು. 2009ರಲ್ಲೇ ವಿಶ್ವದ ಸುಪ್ರಸಿದ್ಧ ಪುರಾತತ್ವಜ್ಞರ ನೆರವು, ಸಲಹೆ ಪಡೆದು, ಇಲ್ಲಿನ ಬೌದ್ಧ ಅವಶೇಷಗಳನ್ನು ಸ್ಥಳಾಂತರಿಸುವ ಯೋಜನೆಯ ರೂಪುರೇಷೆಗಳನ್ನು ನಿಗದಿಪಡಿಸಲಾಯಿತು.

ಅಂತರರಾಷ್ಟ್ರೀಯ ಖ್ಯಾತಿ ಹಾಗೂ ಮನ್ನಣೆ ಹೊಂದಿದ ತಜ್ಞರ ತಂಡವು ಮೆಸ್ ಐನಾಕ್ ಪ್ರದೇಶವನ್ನೆಲ್ಲಾ ಸೂಕ್ಷ್ಮವಾಗಿ ಜಾಲಾಡಿ, ಬೌದ್ಧ ಅವಶೇಷಗಳ ಬಗೆಗಿನ ನಿಖರ ಮಾಹಿತಿ ಪತ್ತೆ ಮಾಡಿದರು; ಈ ತಜ್ಞರೊಂದಿಗೆ ಅಮೆರಿಕಾ, ಚೀನಾ ಮತ್ತು ಅಫಘಾನಿಸ್ತಾನಗಳ ಭೂಗರ್ಭಶಾಸ್ತ್ರಜ್ಞರು ಜೊತೆಗೂಡಿದರು. ಪುರಾತತ್ವ ತಜ್ಞರು ಈ ಭಾಗದಲ್ಲಿ 10,000ಕ್ಕೂ ಹೆಚ್ಚು ಬೌದ್ಧ ಅವಶೇಷಗಳು (ಬುದ್ಧ ಪ್ರತಿಮೆಗಳು, ಬುದ್ಧ ಮಂದಿರಗಳು, ಬುದ್ಧ ವಿಹಾರಗಳು, ಸ್ತೂಪಗಳು, ಪಗೋಡಾಗಳು, ವಿಶ್ರಾಂತಿಧಾಮಗಳು, ಅರಮನೆಗಳು ಇತ್ಯಾದಿ) ದೊರೆತದ್ದನ್ನು ಒಂದೆಡೆ ದಾಖಲಿಸುತ್ತಾ ಹೋದರೆ, ಇವರೊಂದಿಗೇ ಇದ್ದ ಮೂರೂ ರಾಷ್ಟ್ರಗಳ ಭೂಗರ್ಭಶಾಸ್ತ್ರಜ್ಞರು ಯಾವ್ಯಾವ ಖನಿಜಗಳು ಯಾವ್ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಮತ್ತು ಎಷ್ಟೆಷ್ಟು ಆಳದವರೆಗೆ ನಿಕ್ಷೇಪ ರೂಪದಲ್ಲಿ ದೊರಕಲಿವೆ ಎಂದು ದಾಖಲಿಸಿದರು.

ಬೌದ್ಧ ಧರ್ಮ ಒಂದಾನೊಂದು ಅವಧಿಯಲ್ಲಿ ಇಡೀ ಮಧ್ಯ ಏಷ್ಯಾವನ್ನು ಆವರಿಸಿತ್ತು. ಭಾರತ–ಚೀನಾ ನಡುವಣ ಮಹತ್ವದ ಸಂಪರ್ಕ ಕೊಂಡಿ ಅಫಘಾನಿಸ್ತಾನವಾಗಿತ್ತು. ಕ್ರಿ.ಪೂ. 1ನೇ ಶತಮಾನದಿಂದ ಬಹುತೇಕವಾಗಿ ಕ್ರಿ.ಶ.9ನೇ ಶತಮಾನದವರೆಗೆ ಬೌದ್ಧ ಧರ್ಮ ಈ ಭಾಗದಲ್ಲಿ ತನ್ನ ತೀವ್ರ ಛಾಪನ್ನು ಬೀರಿತ್ತು.

ಒಂದೊಮ್ಮೆ ಪ್ರಧಾನ ಬೌದ್ಧ ನೆಲೆಯಾಗಿದ್ದ ಈ ಭಾಗದಲ್ಲಿ ಕ್ರಮೇಣ ನೆಸ್ಟೋರಿಯನ್ ಕ್ರೈಸ್ತರು, ಪರ್ಷಿಯನ್ನರು, ಝುರತ್ರುಷ್ಟರು, ಹಿಂದೂಗಳು, ಜ್ಯೂಗಳು ಮತ್ತು ಕಡೆಗೆ ಮುಸ್ಲಿಮರು ತಮ್ಮ ತಮ್ಮ ಸಂಸ್ಕೃತಿಸಹಿತ ಬಾಳಿ, ಬದುಕಿದ್ದು ಕೂಡ ಬೌದ್ಧ ಧರ್ಮದ ಉದಾರ ಚಿಂತನಾ ಧಾಟಿಗೆ ಅನನ್ಯ ಸಾಕ್ಷ್ಯ.

ಮಧ್ಯ ಏಷ್ಯಾ ಭಾಗದಲ್ಲೆಲ್ಲ ವ್ಯಾಪಕವಾಗಿ ಕಾಣುವ ಬೌದ್ಧ ಪರಂಪರೆಯ ಅವಶೇಷಗಳ ರಕ್ಷಣೆಗೆ ವಿಶ್ವದ ಪ್ರಾಜ್ಞರು ಈಗಲಾದರೂ ಧೃಡತೆಯಿಂದ ಮುಂದಾಗಬೇಕಿದೆ. 'ಮೆಸ್ ಐನಾಕ್ ಪ್ರದೇಶದ ವಿಶಿಷ್ಟ ಬೌದ್ಧ ಪರಂಪರೆಯ ಅವಶೇಷಗಳಿಂದ ವಿಶ್ವ ಸಂಸ್ಕೃತಿ ವಂಚಿತಗೊಳ್ಳಬಾರದು' ಎಂಬುದು ಅನೇಕ ವಿಶ್ವಪ್ರಸಿದ್ಧ ಪುರಾತತ್ವ ತಜ್ಞರ ಅಭಿಮತವಾಗಿದೆ. ಇದನ್ನು ಪ್ರಪಂಚ ಕೇಳಿಸಿಕೊಳ್ಳಬೇಕಿದೆ.

ಬೌದ್ಧ ಧರ್ಮ ಬೆರೆತ ಪರಂಪರೆ ತನ್ನದು ಎಂದು ಬೀಗುವ ಚೀನಾ, ಬಾಮಿಯಾನ್ ಬೌದ್ಧ ಪ್ರತಿಮೆಗಳನ್ನು ಧ್ವಂಸ ಮಾಡಿದ ತಾಲಿಬಾನ್ ಉಗ್ರವಾದಿಗಳನ್ನು ಮಟ್ಟ ಹಾಕುವುದು ತನ್ನ ಧ್ಯೇಯ ಎಂದು ಹೇಳಿಕೊಳ್ಳುವ ಅಮೆರಿಕಾ, ತನ್ನ ಪ್ರಾಚೀನ ಪರಂಪರೆಯನ್ನು ಕೇವಲ ಹಣದ ರೂಪದಲ್ಲಿ ಕಾಣುವ ಚಿತ್ತದೋಷಕ್ಕೆ ಒಳಗಾಗಿರುವ ಅಫಘಾನಿಸ್ತಾನ್ – ಈ ಮೂರರಲ್ಲಿ ಯಾವ ದೇಶಕ್ಕೂ ಪ್ರಾಮಾಣಿಕತೆ, ಸಂಸ್ಕೃತಿ/ಪರಂಪರೆ ನಿಷ್ಠೆ ಇಲ್ಲ.

ಮೆಸ್ ಐನಾಕ್ ಪ್ರದೇಶದಲ್ಲಿ ಗಣಿಗಾರಿಕೆಯು ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಲಿದೆಯೆ? ಈ ಪ್ರಶ್ನೆಗೆ ನಿ:ಸಂದೇಹವಾಗಿ 'ಹೌದು' ಎಂದು ಹೇಳಲೂ ಬರುತ್ತಿಲ್ಲ. ಏಕೆಂದರೆ, ಗಣಿಗಾರಿಕೆಯ ಲಾಭವನ್ನು ಹಂಚಿಕೊಳ್ಳುವ ವಿಷಯದಲ್ಲಿ ಅಮೆರಿಕಾ, ಚೀನಾ ಮತ್ತು ಅಫಘಾನಿಸ್ತಾನಗಳ ನಡುವೆಯೆ ಬಿರುಕು ಮೂಡಿದೆ. ಈ ಗಣಿಗಾರಿಕೆಗೆ ಈ ಹಂತದಲ್ಲಿ ತನ್ನ ಸಮ್ಮತಿ ಇಲ್ಲ ಎಂದು ವಿಶ್ವ ಬ್ಯಾಂಕೂ ತಿಳಿಸಿದೆ.

2012ರ ಆಗಸ್ಟ್‌ನಲ್ಲಿ ತಾಲಿಬಾನ್ ಉಗ್ರವಾದಿಗಳು ಈ ಭಾಗದ ಮೇಲೆ ರಾಕೆಟ್ ಬಾಂಬ್ ದಾಳಿ ಮಾಡಿದರು; ಆಗ ಇಲ್ಲಿನ ಗಣಿ ತಜ್ಞರು, ಕಾರ್ಮಿಕರು ಓಡಿ ಹೋದರು. ಮೆಸ್ ಐನಾಕ್ ಪ್ರದೇಶದಲ್ಲಿನ ಬೌದ್ಧ ಪರಂಪರೆಯ ಅವಶೇಷಗಳನ್ನು ಕಂಪ್ಯೂಟರೀಕರಣ ಮಾಡುವವರೆಗೆ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಹಿಡಿಯುವಂತೆ ಫ್ರಾನ್ಸ್ ಪುರಾತತ್ವ ಶಾಸ್ತ್ರ ಮಿಷನ್ ಮನವಿ ಮಾಡಿದೆ. ಅಮೆರಿಕನ್ ಚಲನಚಿತ್ರ ನಿರ್ದೇಶಕರೊಬ್ಬರು, ಈ ಪ್ರದೇಶದಲ್ಲಿ ಈಗ ಉಳಿದಿರುವ ಬೌದ್ಧ ಅವಶೇಷಗಳ ಸಾಕ್ಷ್ಯ ಚಿತ್ರ ನಿರ್ಮಾಣಕ್ಕೆ ಅನುಮತಿ ಕೋರಿದ್ದಾರೆ. ವಿಶ್ವದ ಹಲವು ವಿಖ್ಯಾತ ಪುರಾತತ್ವ ತಜ್ಞರು ಈ ವಿಷಯವನ್ನು ಯುನೆಸ್ಕೊವರೆಗೆ ಒಯ್ದಿದ್ದಾರೆ.

ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಮೆಸ್ ಐನಾಕ್ ಪ್ರದೇಶದಲ್ಲಿ ಬೌದ್ಧ ಪರಂಪರೆಯ ಅವಶೇಷಗಳ ಮೇಲಿನ ಆಕ್ರಮಣ ನಿಂತೀತೆ?

ಭರವಸೆ ಇಲ್ಲ. ಏಕೆಂದರೆ, ವಿಶ್ವದ ಪ್ರಾಚೀನ ಪರಂಪರೆಯ ಮೇಲೆ ಅವಿವೇಕಿ ದೃಷ್ಟಿ ಬೀರುವ ಪ್ರವೃತ್ತಿ ಹೆಚ್ಚುತ್ತಿದೆ. ಸಾಮ್ರಾಜ್ಯಶಾಹಿ, ಸರ್ವಾಧಿಕಾರಿ, ಉಗ್ರವಾದಿ, ಮತೀಯವಾದಿ ಶಕ್ತಿಗಳ ಬಲ ಹೆಚ್ಚುತ್ತಿದೆ; ಇದನ್ನು ಎಲ್ಲೆಲ್ಲೂ ಕಾಣಬಹುದು.

ನೋಡಿ. ಇಜಿಪ್ಟ್‌ನಲ್ಲಿ ಮುಸ್ಲಿಂ ಬ್ರದರ್‌ಹುಡ್ ಅಧಿಕಾರಕ್ಕೆ ಬಂದ ನಂತರದ ಕಾಲದಲ್ಲಿ 'ಸ್ಫಿಂಕ್ಸ್ ಮತ್ತು ಪಿರಮಿಡ್‌ಗಳನ್ನು ನೆಲಸಮ ಮಾಡಬೇಕು' ಎಂಬ ಅಭಿಪ್ರಾಯ ಗಾಢವಾಗುತ್ತಿದೆ. ಈ ಬಗ್ಗೆ ರಭಸದಿಂದ ಜನಮತ ಮೂಡಿಸಲಾಗುತ್ತಿದೆ. ಮಾಲಿ ದೇಶದ ಟಿಂಬಕ್ಟುನಲ್ಲಿ ಸೂಫಿ ಪಂಥದ ಪಳೆಯುಳಿಕೆಗಳನ್ನು ಅಲ್ಲಿನ ಮತೀಯವಾದಿ ಮುಸ್ಲಿಂ ಬಣವೊಂದು ಧ್ವಂಸ ಮಾಡಿ ಹಾಕಿದೆ. ಭಾರತದ ಪರಂಪರೆಯ ಭಾಗ ಆಗಿರುವ ಇಸ್ಲಾಂ ಕೊಡುಗೆಯನ್ನು ಹೊಸಕಿ ಹಾಕುವ ಹುನ್ನಾರವನ್ನು ಹಿಂದುತ್ವವಾದಿ ಶಕ್ತಿಗಳು ದಶಕಗಳಿಂದ ಹೆಣೆಯುತ್ತಾ ಬಂದಿವೆ.

ಉದಾತ್ತ ನಿಲವು, ಉದಾರ ದೃಷ್ಟಿಕೋನ ಇರುವ ಸಮಸ್ತ ಸಂಸ್ಕೃತಿ–ಪರಂಪರೆಯ ಸಂರಕ್ಷಕ ಶಕ್ತಿಗಳು ಸತತ ಕ್ರಿಯಾಶೀಲತೆಯಿಂದ ವಿಶ್ವಕ್ಕೆ ವಿವೇಕವನ್ನು ಮನಗಾಣಿಸಿ ಕೊಡುವ ಕಾರ್ಯ ದಲ್ಲಿ ಪೂರ್ಣ ಬದ್ಧತೆಯೊಂದಿಗೆ ನಿರಂತರವಾಗಿ ತೊಡಗಬೇಕಿದೆ